**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/127/ಸಪ್ರಾ/ಎಜಿಪಿ/ಬಸ್ಥಾವಿ/2015-16 (ಭಾಗ-2)    ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 26.01.2022

## <u>ಸುತ್ತೋಲೆ</u>

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ ಯುಜಿಸಿ ವೃತ್ತಿ ಪದೋನ್ನತಿಯ ನಿಯಮಗಳಡಿಯಲ್ಲಿ ಪ್ರಾಧ್ಯಾಪಕರ (ಪ್ರೊಫೆಸರ್) ಹುದ್ದೆಗೆ ಸ್ಥಾನೀಕರಣದ ಮೂಲಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 418 ಡಿಸಿಇ 2013, ದಿ:13.03.2018 ರ ಆದೇಶ.
2. ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ : 18.06.2018ರ ಸುತ್ತೋಲೆ
3. ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ : 26.07.2021ರ ಸುತ್ತೋಲೆ
4. ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ : 13.10.2021ರ ಸುತ್ತೋಲೆ
5. ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ : 16.12.2021ರ ಸುತ್ತೋಲೆ

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ **ಸಹ ಪ್ರಾಧ್ಯಾಪಕರುಗಳಿಗೆ ಯುಜಿಸಿ ನಿಯಮಗಳನ್ವಯ** ಪ್ರಾಧ್ಯಾಪಕರ(ಪ್ರೊಫೆಸರ್) ಹುದ್ದೆಗೆ ಬಡ್ತಿ ನೀಡಲು ಅನುಮತಿ ನೀಡಲಾಗಿರುತ್ತದೆ ಅದರನ್ವಯ ಉಲೇಖ(2)ರ ಸುತ್ತೋಲೆಯಲ್ಲಿ ಅರ್ಹ ಸಹ ಪ್ರಾಧ್ಯಾಪಕರುಗಳಿಂದ ವೇತನ ಶ್ರೇಣಿ ರೂ.37400-67000 ರಲ್ಲಿ ರೂ.10000/- ಎ.ಜಿ.ಪಿ. ಮಂಜೂರು ಮಾಡುವ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಉಲ್ಲೇಖ(3)ರ ಸುತ್ತೋಲೆಯಲ್ಲಿ ಪ್ರಾಧ್ಯಾಪಕ ಹುದ್ದೆಗೆ ಈಗಾಗಲೇ ಈ ಕಛೇರಿಗೆ ಹಾರ್ಡ್‌ಕಾಪಿ ಮುಖಾಂತರ ಸಲ್ಲಿಸಿರುವ ಮಾಹಿತಿಗಳನ್ನು Google Form ನಲ್ಲಿ ಭರ್ತಿ ಮಾಡಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ ಹಾಗೂ ಉಲ್ಲೇಖ (4) ಮತ್ತು (5) ಸುತ್ತೋಲೆಗಳಲ್ಲಿ ದಾಖಲಾತಿಗಳನ್ನು ಸಲ್ಲಿಸಲು ಮತ್ತೊಮ್ಮೆ ಕಾಲಾವಕಾಶ ನೀಡಲಾಗಿರುತ್ತದೆ.

ಅದರನ್ವಯ ಸ್ವೀಕೃತವಾಗಿರುವ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲಿಸಿ **ಅನುಬಂಧ-01ರಲ್ಲಿ** ಅರ್ಹ ಸಹ ಪ್ರಾಧ್ಯಾಪಕರುಗಳ ವಿವರಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುತ್ತದೆ. **ಅರ್ಹರಾದ ಸಹ ಪ್ರಾಧ್ಯಾಪಕರುಗಳಿಗೆ ವಿಷಯವಾರು ದಾಖಲಾತಿ ಪರಿಶೀಲನೆಗೆ ದಿನಾಂಕ: 28.01.2022 ರಂದು ನಿಗಧಿಪಡಿಸಲಾಗಿರುತ್ತದೆ. ಅದರನ್ವಯ** ಪಟ್ಟಿಯಲ್ಲಿ ನಮೂದಿಸಿರುವ **ಸಹ ಪ್ರಾಧ್ಯಾಪಕರುಗಳು ಸದರಿ ದಿನಾಂಕದಂದು** ***<u>ಪೂರ್ವಾಹ್ನ 10.00 ಗಂಟೆಗೆ ಕೇಂದ್ರ ಕಛೇರಿಯಲ್ಲಿ</u>*** ದಾಖಲಾತಿ ಪರಿಶೀಲನೆಗೆ ಈ

ಸುತ್ತೋಲೆಯೊಂದಿಗೆ ಲಗತ್ತಿಸಿರುವ ಚೆಕ್ ಲಿಸ್ಟ್‌ನಲ್ಲಿ ಮಾಹಿತಿಗಳನ್ನು ತುಂಬಿ ಸದರಿ ಚೆಕ್ ಲಿಸ್ಟ್‌ನ ಪ್ರತಿಯೊಂದಿಗೆ ಅದರಲ್ಲಿ ನಮೂದಿಸಿರುವ ಅಗತ್ಯ ದಾಖಲೆಗಳೊಂದಿಗೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ. ಈಗಾಗಲೇ ಪಟ್ಟಿಯಲ್ಲಿ ಹೆಸರು ನಮೂದಿಸಿದ್ದು ವಿವಿಧ ಕಾರಣಾಂತರಗಳಿಂದ ಪರಿಶೀಲನೆಗೆ ಹಾಜರಾಗಲು ಸಾಧ್ಯವಾಗದಿದ್ದ ಸಹ ಪ್ರಾಧ್ಯಾಪಕರುಗಳು ಸದರಿ ದಿನದಂದು ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ.

**ಸಂದರ್ಶನದ ಸಂದರ್ಭದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲೆಗಳು**

1. ರೂ ೯೦೦೦/- ಎಜಿಪಿ ಮಂಜೂರಾತಿ ಆದೇಶದ ಪ್ರತಿ & ಮಹಾಲೇಖಪಾಲರು ನಿಗಧಿಪಡಿಸಿರುವ ವೇತನ ಪ್ರತಿ.
2. ಪಿಹೆಚ್.ಡಿ ಪದವಿ ಸಂಬಂಧಿತ ಎಲ್ಲಾ ದಾಖಲಾತಿಗಳು (ಕೋರ್ಸ್ ವರ್ಕ್ ಮೂಲ ಅಂಕಪಟ್ಟಿ, ಅಧಿಸೂಚನೆ ಮೂಲ ಪ್ರತಿ ಮತ್ತು ಮಹಾ ಪ್ರಬಂಧದ ಪ್ರತಿ)
3. ಪ್ರಕಟಿಸಿರುವ ಲೇಖನಗಳ ಬಗ್ಗೆ ನಮೂದಿಸಿರುವ ISSN/ISBN No. ಒಳಗೊಂಡಂತೆ ಮೂಲ ದಾಖಲೆ ಹಾಗೂ ಪ್ರಾಂಶುಪಾಲರಿಂದ ದೃಢೀಕರಿಸಿದ ನಕಲು ಪ್ರತಿ.
4. ಈಗಾಗಲೇ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನಮೂದಿಸಲಾಗಿರುವ ಎ.ಪಿ.ಐ ಅಂಕಗಳಿಗೆ ಪೂರಕವಾದ ಎಲ್ಲಾ ದಾಖಲೆಗಳು ಹಾಗೂ ಮೂಲ ಪ್ರತಿ. (Criteria wise & Year wise)
5. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ/ ಸಂಬಂಧಿಸಿದ ಮೇಲಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿ.
6. ಪ್ರಾಧ್ಯಾಪಕರ ಹುದ್ದೆಗೆ ಪ್ರಸ್ತಾವನೆ ಸಲ್ಲಿಸಿ ತದನಂತರದಲ್ಲಿ ನಿಧನ ಹೊಂದಿದ ಸಹ ಪ್ರಾಧ್ಯಾಪಕರುಗಳ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಗಳು ಸಂದರ್ಶನಕ್ಕೆ ಹಾಜರಾಗಲು ಸೂಚಿಸಿರುವ ದಿನಾಂಕದಂದು ಸಮಿತಿಯ ಮುಂದೆ ಹಾಜರುಪಡಿಸಲು ಸೂಚಿಸಿದೆ.

***ವಿ.ಸೂ.: 1. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ.***
***2. ಸಂದರ್ಶನಕ್ಕೆ ಹಾಜರಾಗುವ ಪ್ರಾಂಶುಪಾಲರುಗಳು/ಸಹ ಪ್ರಾಧ್ಯಾಪಕರುಗಳು ಮುನ್ನಚರಿಕೆ ಕ್ರಮವಾಗಿ ಕಡ್ಡಾಯವಾಗಿ ಮಾಸ್ಕ್ ಧರಿಸಿರತಕ್ಕದ್ದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.***

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ :

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರುಗಳಿಗೆ – *ತಮ್ಮ ಕಾಲೇಜಿನ ಸಂಬಂಧಿಸಿದ ಸಹ ಪ್ರಾಧ್ಯಾಪಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ.*
2. ಅನುಬಂಧದಲ್ಲಿ ಲಗತ್ತಿಸಿರುವ ಎಲ್ಲಾ ಸಹ ಪ್ರಾಧ್ಯಾಪಕರುಗಳಿಗೆ (ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ) – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – *ಮಾಹಿತಿಗಾಗಿ.*
4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – *ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.*

ಪ್ರತಿಯನ್ನು :

1. ಮಾನ್ಯ ಆಯುಕ್ತರು/ಮಾನ್ಯ ನಿರ್ದೇಶಕರ/ಮುಖ್ಯ ಆಡಳತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ/ಜಂಟಿ ನಿರ್ದೇಶಕರು (ಶೈಕ್ಷಣಿಕ) ಇವರ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
2. ಕಛೇರಿ ಪ್ರತಿ.

**PROFESSOR PROMOTION 2018**

**ADDITIONAL SCRUTINY LIST**

| | | |
|---|---|---|
| 1 | KANNADA | B. P. MATHAD |
| | | H. N. MANJURAJU |
| | | SANNAHANUMAPPA |
| | | H. P. GEETHA |
| | | D. SUMANGALA |
| | | DADAPEER B. C. |
| | | R. MAHESH |
| | | SHEKAR N |
| 2 | ENGLISH | MADHUSUDHAN REDDY A. R. |
| | | BHANUMATHI HARAN |
| | | A. M. PRADHANE |
| 3 | ECONOMICS | BHIMESHAPPA R. ANNASAGAR |
| | | T. R. LEELAVATHI |
| | | CHANDRA NAIK M. |
| | | JAYALAKSHMI SREEDHAR |
| 4 | PHYSICS | VENKATESHAPPA Y. |
| | | D. S. BIRADAR |
| 5 | HINDI | S. N. MANJULA |
| | | DAYANAND R. SURVASE |
| 6 | BOTANY | JENNIFER LOLITA C. |
| 7 | URDU | KHALIDA BEGUM |
| 8 | COMMERCE | AJAZ AHMED KHAN |
| 9 | POLITICAL SCIENCE | M. NAGESH |